■ ವಿಶಾಖ ಎನ್.

# ಬಹುಮುಖಿ ತಾರಾ ಹೊಳಪು

ಮಿಥುನ್ ಚಕ್ರವರ್ತಿ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರಕಟವಾದಾಗ, ಅವರ ಬದುಕಿನ ಹಳೆಯ ಘಟನೆಗಳು ಒಂದೊಂದಾಗಿ ಮರುಕಳಿಸತೊಡಗಿದವು. ಎಂದೋ ಅವರು ನೀಡಿದ ಸಂದರ್ಶನದ ಪ್ರಮುಖ ಭಾಗಗಳು ಮತ್ತೆ ಅನುರಣಿಸಿದವು. ಅವರಿಗಿಂತ ಅರ್ಹರು ಈ ಪ್ರಶಸ್ತಿಗೆ ಇದ್ದರಲ್ಲವೇ ಎನ್ನುವ ಕುರಿತು ಪರ–ವಿರೋಧ ಚರ್ಚೆಗಳು ಕೂಡ ನಡೆದವು. ಮಿಥುನ್ ಮೊದಲಿನಿಂದಲೂ ರಾಜಕೀಯ ಸಿದ್ಧಾಂತಗಳನ್ನು ನೆಚ್ಚಿಕೊಂಡು ಬಂದವರು. ಅವರು ಮೊದಲು ನಕ್ಸಲಿಸಂನಲ್ಲಿ ಇದ್ದರು. ಅಣ್ಣ ವಿದ್ಯುದಾಘಾತದಿಂದ ಮೃತಪಟ್ಟ ನಂತರ ಅವರು ಮನೆಯ ಕಡೆಗೆ ಮುಖ ಮಾಡಿದರು.

‘ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ’ದಲ್ಲಿ ಅವರನ್ನು ನಿರ್ದೇಶಕ ಮೃಣಾಲ್ ಸೆನ್ ಕಂಡರು. ಒಂದು ತರಗತಿ ತೆಗೆದುಕೊಂಡಿದ್ದಾಗ, ಅವರಿಗೆ ಮಿಥುನ್ ಚಹರೆ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಮೃಣಾಲ್ ಅವರೂ ರಾಜಕೀಯ ವಸ್ತುಗಳ ಸಿನಿಮಾ ಮಾಡುತ್ತಿದ್ದವರು. ಆ ಪ್ರಕಾರದ ಎರಡು ಸಿನಿಮಾಗಳು ಸೋತಿದ್ದರಿಂದ ಅವರು ಸಾಮಾಜಿಕವಾಗಿ ಮುಖ್ಯವಾದ ವಸ್ತುವೊಂದನ್ನು ಸಿನಿಮಾ ಮಾಡಲು ನಿರ್ಧರಿಸಿ, ಒಡಿಯಾ ಭಾಷೆಯ ಸಣ್ಣಕತೆಯೊಂದನ್ನು ಆರಿಸಿಕೊಂಡರು. ಭಾಗಬತಿ ಚರಣ್ ಚಕ್ರವರ್ತಿ ಅವರ ‘ಶಿಕಾರ್’ ಎನ್ನುವ ಸಣ್ಣಕತೆ ಅದು. ಕೆ. ರಾಜೇಶ್ವರ ರಾವ್ ನಿರ್ಮಾಣದ ಆ ಸಿನಿಮಾ ಬುಡಕಟ್ಟು ಸಮುದಾಯದವರ ಕಥನ ಒಳಗೊಂಡಿತ್ತು. ಯಾವ ತಾರೆಗಳ ಹಂಗೂ ಬೇಡ ಎಂದು ಮೃಣಾಲ್ ಸಂಕಲ್ಪ ಮಾಡಿದರು.

ಆಗ ಅವರಿಗೆ ಮನದಲ್ಲಿ ಛಾಪು ಮೂಡಿಸಿದ್ದ ಮಿಥುನ್ ನೆನಪಾದರು. ಪಾತ್ರದ ಆಯ್ಕೆಗೆ ಮುನ್ನ ಒಂದು ಸಣ್ಣ ಪರೀಕ್ಷೆಗೆ ಒಳಪಡಿಸಿದರು. ಸಿನಿಮಾ ನಟನಾಗಬೇಕು ಎಂಬ ಮಿಥುನ್ ಕನಸಿಗೆ ರೆಕ್ಕೆ ಹಚ್ಚಿದರು. ನಾಯಕಿಯ ಪಾತ್ರಕ್ಕೆ ಮಮತಾ ಶಂಕರ್ ಎಂಬುವವರನ್ನು ಹೆಕ್ಕಿಕೊಂಡರು. ಅದೊಂದು ರೀತಿ ರೆಪರ್ಟರಿಯಲ್ಲಿ ರಂಗಪಾಠ ಹೇಳಿಕೊಡುವ ಮಾರ್ಗದ ಸಿನಿಮಾ ಕಟ್ಟುವಿಕೆ. ಮಿಥುನ್ ಅವರೊಳಗೆ ಇದ್ದ ನಟನೋತ್ಸಾಹಕ್ಕೆ ಅಂತಹ ಸಾಣೆ ಸಿಕ್ಕಿದ್ದು ಅದೃಷ್ಟವೇ ಹೌದು. ಆ ಹಿಂದಿ ಚಿತ್ರದ ಹೆಸರು ‘ಮೃಗಯಾ’.

ಪ್ರವೇಶ ಇಷ್ಟು ಆಸಕ್ತಿಕರವಾಗಿ ಇದ್ದರೂ ಮಿಥುನ್ ಅವರಿಗೆ ಅವಕಾಶಗಳು ಸುಲಭವಾಗಿ ಹುಡುಕಿಕೊಂಡು ಬರಲಿಲ್ಲ. ಕೆಲವರು ಅವರನ್ನು ‘ಕಪ್ಪು ಹುಡುಗ’ ಎಂದು ದೂರ ಇಟ್ಟರು. ಇನ್ನು ಕೆಲವರು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತಾಡಿದರು. ಬಂಗಾಳದ ಹುಡುಗ ಮುಂಬೈಗೆ ಬಂದಿದ್ದು ದಿಟ್ಟ ನಿರ್ಧಾರ. ಮರಳಿ ಹೋಗುವ ಸ್ಥಿತಿಯಲ್ಲಿ ಮಿಥುನ್ ಇರಲಿಲ್ಲ. ಯಾವುದೋ ಹಾಸ್ಟೆಲ್‌ನ ಎದುರೋ ಉದ್ಯಾನದಲ್ಲೋ ಮಲಗಿ ಎದ್ದ ದಿನಗಳ ನೆನಪು ಅವರಿಗೆ ಚೆನ್ನಾಗಿ ಇದೆ. ಹೊತ್ತೂಟಕ್ಕೂ ಪರದಾಟ. ಹೀಗೆ ಇರುವಾಗ ಒಂದೊಮ್ಮೆ ಅವರಿಗೆ ಆತ್ಮಹತ್ಯೆಯ ಆಲೋಚನೆ ಕೂಡ ಬಂದಿತ್ತು. ಅಭಿನಯದ ಮರೀಚಿಕೆಯ ಬೆನ್ನುಹತ್ತಿ ಬರುವವರು ತಮಗೆ ಆಗಿದ್ದಂತೆಯೇ ಕಹಿ ಉಂಡೇ ಸಿಹಿಯ ಕನವರಿಕೆ ಮಾಡಬೇಕು, ಯಾವುದೇ ಕಾರಣಕ್ಕೂ ಕನಲಬಾರದು ಎಂದು ಕಿವಿಮಾತು ಹೇಳುತ್ತಿರುತ್ತಾರೆ.

ಮಿಥುನ್ ಯಾವಾಗ ತಾವು ತಿರಸ್ಕಾರಕ್ಕೆ ಒಳಗಾದರೋ ಆಗ ಅಭಿನಯದ ಕೌಶಲಕ್ಕೆ ನೃತ್ಯ ಲಾಲಿತ್ಯವನ್ನೂ ಸೇರಿಸಿಕೊಂಡರು. 1982ರಲ್ಲಿ ತೆರೆಕಂಡ ‘ಡಿಸ್ಕೋ ಡಾನ್ಸರ್’ ಸಿನಿಮಾ ದೊಡ್ಡ ಯಶಸ್ಸು ಕಂಡಿತು. ಆ ವರ್ಷ ಅವರು ನಟಿಸಿದ್ದ 11 ಚಿತ್ರಗಳು ತೆರೆಕಂಡಿದ್ದರೂ ಹೆಚ್ಚು ಜನಪ್ರಿಯವಾದುದು ವರ್ಷದ ಕೊನೆಯಲ್ಲಿ ಬಿಡುಗಡೆಯಾದ ‘ಡಿಸ್ಕೋ ಡಾನ್ಸರ್’ ಚಿತ್ರದಿಂದ.

ಸಂಖ್ಯಾ ಸಮೃದ್ಧಿ ದೃಷ್ಟಿಯಿಂದಲೂ ಮಿಥುನ್ ಮುಂದಿದ್ದರು. 1989ರಲ್ಲಿ ಅವರು ಬಣ್ಣ ಹಚ್ಚಿದ್ದ 19 ಸಿನಿಮಾಗಳು ತೆರೆಕಂಡಿದ್ದವು. ಇದು ಲಿಮ್ಕಾ ದಾಖಲೆ.

‘ಅಗ್ನಿಪತ್’ ಸಿನಿಮಾ ನಟನೆಗೆ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದ ಅವರು, ಮೊದಲ ಚಿತ್ರದ ಅಭಿನಯ ಸಾಮರ್ಥ್ಯಕ್ಕೆ ರಾಷ್ಟ್ರಪ್ರಶಸ್ತಿಗೆ ಭಾಜನರಾದ ಅಪರೂಪದವರು. ಒಟ್ಟು ಮೂರು ರಾಷ್ಟ್ರಪ್ರಶಸ್ತಿಗಳು ಅವರಿಗೆ ಸಂದಿವೆ. ಬಂಗಾಳಿ ಸಿನಿಮಾಗಳಲ್ಲೂ ಅಭಿನಯಿಸುತ್ತಾ, ಹಿಂದಿ ಚಿತ್ರರಂಗದ ಚುಂಗನ್ನೂ ಹಿಡಿದುಕೊಂಡ ಅವರು, 1990ರ ದಶಕದ ನಡುಘಟ್ಟದಲ್ಲಿ ಸಂಖ್ಯಾ ಸಮೃದ್ಧಿಯ ಪರಿಧಿಯಿಂದ ಹೊರಬಂದರು. ಸಿನಿಮಾಗಳ ಸಂಖ್ಯೆ ವಿರಳ ಆಯಿತು. ಪ್ರಯೋಗಮುಖಿ ಚಿತ್ರಗಳ ನಿರ್ಮಾಣ ಕೈಗೆತ್ತಿಕೊಂಡು, ಕೈ ಸುಟ್ಟುಕೊಂಡರು.

2000ರ ದಶಕದಲ್ಲಿ ಮತ್ತೆ ಅವಕಾಶಗಳು ಹುಡುಕಿ ಬಂದವು. ಕಿರುತೆರೆ ಶೋಗಳಲ್ಲಿ ಜಡ್ಜ್ ಆದರು. ರಾಘವ್ ಜೋಯಲ್ ಅವರಂತಹ ಪ್ರತಿಭೆಯನ್ನು ನೃತ್ಯ ಸ್ಪರ್ಧೆಗೆ ಆಯ್ಕೆ ಮಾಡಿದ್ದೇ ಅವರು. ಈಗ ರಾಘವ್ ಸೆನ್ಸೇಷನ್. 2014ರಲ್ಲಿ ರಾಜ್ಯಸಭೆಗೆ ಸಂಸದರಾಗಿ ಆಯ್ಕೆ ಆಗಿ ರಾಜಕೀಯ ಮೊಗಸಾಲೆಗೆ ಕಾಲಿಟ್ಟರು. ಪ್ರಣವ್ ಮುಖರ್ಜಿ, ಮಮತಾ ಬ್ಯಾನರ್ಜಿ ಎಂಬ ಎರಡು ಪ್ರತ್ಯೇಕ ಧ್ರುವಗಳನ್ನು ಭೇಟಿ ಮಾಡಿಸಿದರು. 2021ರಲ್ಲಿ ಬಿಜೆಪಿ ಸೇರಿದರು.

‘ಕಾಶ್ಮೀರ್ ಫೈಲ್ಸ್’ ಸಿನಿಮಾದಲ್ಲಿ ಅಭಿನಯಿಸಲು ಮಿಥುನ್ ಒಪ್ಪಿದ್ದಕ್ಕೂ ಹಾಗೂ ಅವರ ಈಗಿನ ರಾಜಕೀಯ ನಿಲುವಿಗೂ ಸಾವಯವ ಸಂಬಂಧವಿದೆ.

ಜಿ.ವಿ. ಅಯ್ಯರ್ ಒಂದು ದಶಕ ಬರೆದು, ತಿದ್ದಿದ ರಾಮಕೃಷ್ಣ ಪರಮಹಂಸರ ಕುರಿತ ಚಿತ್ರದ ಕೇಂದ್ರ ಪಾತ್ರದಲ್ಲೂ ಮಿಥುನ್ ನಟಿಸಿದ್ದರು. ಕಾಲಾಂತರದಲ್ಲಿ ಸಮಾಜೋ–ರಾಜಕೀಯ ಧೋರಣೆ ಬದಲಿಸಿಕೊಂಡೂ ಹೊಸತನ್ನು ಹಂಬಲಿಸುತ್ತ ಬಂದ ಅವರು, ಪ್ರಭಾಸ್ ನಟನೆಯ ತೆಲುಗು ಚಿತ್ರದಲ್ಲಿ ಅಭಿನಯಿಸುವುದು ಈಗ ನಿಕ್ಕಿಯಾಗಿದೆ. ಮಿಥುನ್ ಬಹುಮುಖಿಗಳ ತಾರಾಹೊಳಪು ಎನ್ನುವುದನ್ನಂತೂ ಅಲ್ಲಗಳೆಯಲಾಗದು. ■

